**ಓ.ಎಸ್. ನಂ. 48/ 2017** **ಪಿ ಡಬ್ಲ್ಯೂ – 1**

**ದಿನಾಂಕಃ 06.11.2023 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – 5 ಮತ್ತು 9 ನೇ ಪ್ರತಿವಾದಿಗಳ ಪರ ವಕೀಲರಿಂದ**

ನಾನು ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಪ್ರತಿವಾದಿಗಳ ವಿರುದ್ಧ ಭಾಗಾಂಶಕ್ಕಾಗಿ ದಾವಾ ಹೂಡಿದ್ದೇನೆಂದರೆ ಸರಿ. ನನ್ನ ತಂದೆಯನ್ನು ಜೋಸೆಫ್ ಎಂದು ಕರೆಯುತ್ತಿದ್ದರು ಎಂದರೆ ಸರಿ. ನನ್ನ ತಂದೆ ಈ ಹಿಂದೆ ಹಿಂದೂ ಧರ್ಮದಿಂದ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿರುತ್ತಾರೆಂದರೆ ಸರಿ. ನನ್ನ ತಂದೆ ರಾಜಮ್ಮ ಎಂಬುವವರನ್ನು ದಿನಾಂಕಃ 20.05.1954 ರಲ್ಲಿ ಕಾಮಗೆರೆಯ ಸೆಂಟ್ ಫ್ರಾನ್ಸಿಸ್ ಚರ್ಚಿನಲ್ಲಿ ಮದುವೆಯಾಗಿರುತ್ತಾರೆಂದರೆ ಸರಿ. ನನ್ನ ತಂದೆ ದಿನಾಂಕಃ 24.03.2016 ರಂದು ನಿಧನರಾಗಿರುವುದರಿಂದ ಅವರ ಮರಣ ಪತ್ರ ಸದರಿ ಚರ್ಚಿನಲ್ಲಿ ದಾಖಲಾಗಿರುತ್ತದೆ ಎಂದರೆ ಸರಿ. ನಾವು ಕಾಮಗೆರೆಯ ಯಾವುದೇ ಚರ್ಚಿಗೆ ಹೋಗುತ್ತಿಲ್ಲ. ನನ್ನ ಶಾಲಾ ದಾಖಲಾತಿಯಲ್ಲಿ ಹಿಂದೂ ಎಸ್ ಸಿ ಎಂದು ದಾಖಲಾಗಿರುತ್ತದೆ. ದಾವಾ ಸ್ವತ್ತುಗಳು ನನ್ನ ತಂದೆ ಸ್ವಯಾರ್ಜಿತವಾಗಿ ಸಂಪಾದನೆ ಮಾಡಿದಂತಹ ಆಸ್ತಿಗಳೆಂದರೆ ಸರಿಯಲ್ಲ. ನಮ್ಮ ಪಿತಾರ್ಜಿತ ಆಸ್ತಿಯ ಬಗ್ಗೆ ವಾದ ಪತ್ರದಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ವಾದ ಪತ್ರದ ಪ್ಯಾರಾ ನಂ. 3 ರಲ್ಲಿ ಹಾಗೂ ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯಪ್ರಮಾಣ ಪತ್ರದಲ್ಲಿ ನನ್ನ ತಂದೆ ಬದುಕಿದ್ದ ಕಾಲದಲ್ಲಿ ಯಾವುದೇ ಆಸ್ತಿ ಪಿತ್ರಾರ್ಜಿತ ಹಾಗೂ ಸ್ವಯಾರ್ಜಿತ ಆಸ್ತಿಗಳು ಇರುವುದಿಲ್ಲ ಎಂದು ಬರೆಸಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ತಪ್ಪಾಗಿ ದಾಖಲಾಗಿರಬಹುದೆಂದು ನುಡಿಯುತ್ತಾರೆ. ನಾವು ಕ್ರೈಸ್ತ ಧರ್ಮದಿಂದ ಹಿಂದೂ ಧರ್ಮಕ್ಕೆ ಮತಾಂತರಗೊಂಡ ಬಗ್ಗೆ ದಾಖಲೆಗಳು ಇರುತ್ತವೆ. ಸದರಿ ದಾಖಲೆಗಳನ್ನು ಹಾಜರು ಪಡಿಸಲು ತೊಂದರೆ ಇರುವುದಿಲ್ಲ. ದಾವಾ ಆಸ್ತಿಗಳನ್ನು ಹೊರತು ಪಡಿಸಿ ಮೋಡಳ್ಳಿ ಗ್ರಾಮದ ಸರ್ವೆ ನಂ. 144 ರಲ್ಲಿ 26 ಸೆಂಟ್,145/1 ರಲ್ಲಿ 75 ಸೆಂಟು, 147/ಎ 1 ರಲ್ಲಿ 88 ಸೆಂಟು, 153/1 ರಲ್ಲಿ 1.72 ಸೆಂಟು, 153/2 ರಲ್ಲಿ 9 ಸೆಂಟು, ಬೂದಬಾಳು ಗ್ರಾಮದ ಸರ್ವೆ ನಂ. 315/ಎ ರಲ್ಲಿ 2 ಎಕರೆ 2 ಸೆಂಟುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ. 1 ರ ಸ್ವತ್ತು ಭೂಸ್ವಾಧೀನಗೊಂಡಾಗ ನನ್ನ ತಂದೆ ಅದನ್ನು ಪ್ರಶ್ನಿಸಿ ಗೌಃ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ಹೆಚ್ಚುವರಿ ಪರಿಹಾರ ಪಡೆದುಕೊಂಡಿರುತ್ತಾರೆಂದರೆ ಸರಿ. ಸಾಕ್ಷಿ ಅದರ ಬಗ್ಗೆ ನಮಗೆ ಗೊತ್ತಿರುವುದಿಲ್ಲವೆಂದು ನುಡಿಯುತ್ತಾರೆ. ದಾವಾ ಐಟಂ 2 ರ ಸ್ವತ್ತು ನನ್ನ ತಂದೆಗೆ ಸ್ವಯಾರ್ಜಿತ ಆಸ್ತಿಯಾಗಿದ್ದರಿಂದ ಅದನ್ನು 9 ನೇ ಪ್ರತಿವಾದಿಗೆ ದಾನಪತ್ರದ ಮೂಲಕ ಬರೆದುಕೊಟ್ಟಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಅದೇ ರೀತಿ ದಾವಾ ಐಟಂ 3 ರ ಸ್ವತ್ತನ್ನು ನನ್ನ ತಂದೆ 5 ನೇ ಪ್ರತಿವಾದಿಗೆ ನೋಂದಾಯಿತ ಕ್ರಯ ಪತ್ರದ ಮೂಲಕ ಬರೆದುಕೊಟ್ಟಿರುತ್ತಾರೆಂದರೆ ಸಾಕ್ಷಿಯು ನನ್ನ ತಂದೆಗೆ ಹುಷಾರಿಲ್ಲದಿದ್ದಾಗ ಅದನ್ನು ಬರೆಸಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಕೆಲವೊಂದು ಆಸ್ತಿಗಳನ್ನು ನನ್ನ ತಂದೆ 9 ನೇ ಪ್ರತಿವಾದಿಗೆ ವಿಲ್ ಮೂಲಕ ಬರೆದುಕೊಟ್ಟಿರುತ್ತಾರೆಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲವೆಂದು ನುಡಿಯುತ್ತಾರೆ. ನನ್ನ ತಂದೆ ಕ್ರಿಶ್ಚಿಯನ್

ಧರ್ಮಕ್ಕೆ ಸೇರಿದ್ದರಿಂದ ಈ ದಾವೆಯನ್ನು ಕ್ರಿಶ್ಚಿಯನ್ ಉತ್ತರಾಧಿಕಾರ ಕಾಯ್ದೆಯಡಿಯಲ್ಲಿ ಹೂಡದೇ ಇರುವುದರಿಂದ ಈ ದಾವೆ ಊರ್ಜಿತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಆ ಕಾರಣ ಈ ದಾವೆಯಲ್ಲಿ ಯಾವುದೇ ಪರಿಹಾರ ಕೇಳಲು ಅರ್ಹನಲ್ಲ ಎಂದರೆ ಸರಿಯಲ್ಲ.

ಇತರ ಪ್ರತಿವಾದಿಗಳು ಗೈರು ಹಾಜರಾಗಿರುವುದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಆನಂದ ಎಂ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.